ಫ್ರೀಡಂ ನ್ಯೂಸ್

# ಫಸಲ್ ಭೀಮಾ ಯೋಜನೆ

# ವಿಮೆಯಲ್ಲಿ 30 ಕೋಟಿ ಲೂಟಿ!




**ಬಾಗಲಕೋಟೆ:** ಅನ್ನದಾತರ ಹೆಸರಲ್ಲಿ ನಡೆಯುತ್ತಿದ್ದ ಬೃಹತ್ ಹಗರಣವೊಂದನ್ನು ಬಾಗಲಕೋಟೆ ಪೊಲೀಸರು ಬೇಧಿಸಿದ್ದಾರೆ. ಕೇಂದ್ರ ಸರ್ಕಾರದ ಪ್ರತಿಷ್ಠಿತ 'ಪ್ರಧಾನಮಂತ್ರಿ ಫಸಲ ಭೀಮಾ' ಯೋಜನೆಯಡಿ ಬರೋಬ್ಬರಿ 30.28 ಕೋಟಿ ರೂಪಾಯಿ ಹಣವನ್ನು ಲೂಟಿ ಮಾಡಿದ ಆರೋಪದ ಮೇಲೆ 11 ಜನರ ವಿರುದ್ಧ ಮುಧೋಳ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ. ಜಿಲ್ಲಾಧಿಕಾರಿ ಕಚೇರಿಗೆ ಬಂದ ಅನಾಮಧೇಯ ಪತ್ರ ಈ ದಶಕದ ದೊಡ್ಡ ವಿಮೆ ವಂಚನೆಯನ್ನು ಬಯಲಿಗೆಳೆದಿದೆ. ಮುಧೋಳ ಸಹಾಯಕ ಕೃಷಿ ನಿರ್ದೇಶಕ ಸಿದ್ದಲಿಂಗೇಶ ದೊಡ್ಡಮನಿ ನೀಡಿದ ದೂರಿನ ಆಧಾರದ ಮೇಲೆ ಕಲ್ಲಪ್ಪ ಹುಣಸೀಕಟ್ಟಿ ಸೇರಿದಂತೆ 11 ಮಂದಿ ಕಿರಾತಕರು ಈಗ ಪೊಲೀಸರ ಅತಿಥಿಗಳಾಗಿದ್ದಾರೆ.

**5 ವರ್ಷಗಳಿಂದ ಸತತ ವಂಚನೆ: ಬೆಳೆಯೇ ಇರದ ಜಮೀನಿಗೆ ಕೋಟ್ಯಂತರ ರೂಪಾಯಿ ವಿಮೆ ಜಮೆ!**

ಈ ವಂಚನೆಯ ಜಾಲವು ಕಳೆದ 2020-21ರಿಂದಲೇ ಸಕ್ರಿಯವಾಗಿತ್ತು ಎಂಬ ಸ್ಫೋಟಕ ಮಾಹಿತಿ ಹೊರಬಿದ್ದಿದೆ. ಆರೋಪಿಗಳು ಜಮೀನಿನಲ್ಲಿ ಅತ್ಯಲ್ಪ ಜಾಗದಲ್ಲಿ ಬೆಳೆ ಬೆಳೆದು, ವಿಮೆ ಪಾಲಿಸಿಯಲ್ಲಿ ಮಾತ್ರ ಸಾವಿರಾರು ಎಕರೆ ಎಂದು ಸುಳ್ಳು ಮಾಹಿತಿ ದಾಖಲಿಸುತ್ತಿದ್ದರು. ನಂತರ ಬೆಳೆ ಹಾಳಾಗಿದೆ ಎಂದು ಸರ್ಕಾರಕ್ಕೆ ತಪ್ಪು ಮಾಹಿತಿ ನೀಡಿ ಕೋಟ್ಯಂತರ ರೂಪಾಯಿ ವಿಮೆ ಹಣವನ್ನು ಗುಳುಂ ಮಾಡುತ್ತಿದ್ದರು. ಈ ಅಕ್ರಮದಲ್ಲಿ ವಿಮಾ ಕಂಪನಿಯ ಕೆಲ ಉದ್ಯೋಗಿಗಳೂ ಶಾಮೀಲಾಗಿದ್ದು, ಸರ್ಕಾರದಿಂದ ಬಂದ ಹಣವನ್ನು ಮಧ್ಯವರ್ತಿಗಳು ಮತ್ತು ಜಮೀನು ಮಾಲೀಕರು ಸಮನಾಗಿ ಹಂಚಿಕೊಳ್ಳುತ್ತಿದ್ದರು ಎಂದು ದೂರಿನಲ್ಲಿ ವಿವರಿಸಲಾಗಿದೆ.

**ಜಮಖಂಡಿ ಎಸಿ ತನಿಖೆಗೆ ಆದೇಶ: ಕೃಷಿ ಅಧಿಕಾರಿಗಳಿಂದ ವಂಚಕರ ಮುಖವಾಡ ಬಯಲು!**

ಈ ಹಗರಣದ ಸುಳಿವು ಸಿಗುತ್ತಿದ್ದಂತೆ ಜಮಖಂಡಿ ಎಸಿ ಅವರು ತನಿಖೆಗೆ ಆದೇಶಿಸಿದ್ದರು. ಪ್ರಸಕ್ತ ವರ್ಷವೊಂದರಲ್ಲೇ ಮೆಕ್ಕೆಜೋಳ ಬೆಳೆಯದಿದ್ದರೂ ಬರೋಬ್ಬರಿ 28.51 ಲಕ್ಷ ರೂಪಾಯಿ ವಿಮೆ ಹಣ ಪಡೆದು ವಂಚಿಸಲಾಗಿದೆ. ವಿಮಾ ಕಂಪನಿಯ ಉದ್ಯೋಗಿಗಳಾದ ಯಶವಂತ, ರಾಕೇಶ್, ಪ್ರಕಾಶ್ ಮತ್ತು ಅನಿಲ್ ಎಂಬುವವರು ಈ ಲೂಟಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂದು ಪೊಲೀಸರು ಶಂಕಿಸಿದ್ದಾರೆ. ರೈತರ ಹೆಸರಲ್ಲಿ ಸರ್ಕಾರದ ಬೊಕ್ಕಸಕ್ಕೆ ಕನ್ನ ಹಾಕಿರುವ ಈ ಗ್ಯಾಂಗ್ ವಿರುದ್ಧ ಈಗ ಕಾನೂನು ಕುಣಿಕೆ ಬಿಗಿಯಾಗಿದ್ದು, ಜಿಲ್ಲಾದ್ಯಂತ ಈ ಸುದ್ದಿ ಸಂಚಲನ ಮೂಡಿಸಿದೆ.

# ಮೊಟ್ಟೆ ಬೆಲೆಯಲ್ಲಿ ಭಾರಿ ಕುಸಿತ!



**ಬೆಂಗಳೂರು:** ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಮೊಟ್ಟೆ ಬೆಲೆಯಲ್ಲಿ ಗಣನೀಯ ಇಳಿಕೆ ಕಂಡುಬಂದಿದ್ದು, ಗ್ರಾಹಕರು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ. ಈ ಹಿಂದೆ ಒಂದು ಮೊಟ್ಟೆಗೆ ₹7.06 ಇದ್ದ ದರವು ಈಗ ಏಕಾಏಕಿ ₹4.60ಕ್ಕೆ ಕುಸಿದಿದೆ. ರಾಷ್ಟ್ರೀಯ ಮೊಟ್ಟೆ ಸಮನ್ವಯ ಸಮಿತಿ (NECC) ನೀಡಿರುವ ಮಾಹಿತಿಯಂತೆ, ಕಳೆದ 15 ದಿನಗಳಲ್ಲಿ ರಾಜ್ಯದಾದ್ಯಂತ ದರದಲ್ಲಿ ಭಾರಿ ವ್ಯತ್ಯಾಸವಾಗಿದ್ದು, ಇದು ಕೋಳಿ ಸಾಕಾಣಿಕೆದಾರರಲ್ಲಿ ಆತಂಕ ಸೃಷ್ಟಿಸಿದೆ. ಹಬ್ಬದ ಸೀಸನ್ ಮುಗಿದಿರುವುದು ಮತ್ತು ಹೆಚ್ಚುತ್ತಿರುವ ಬೇಸಿಗೆಯ ಶಾಖದಿಂದಾಗಿ ಮೊಟ್ಟೆಗಳ ಬೇಡಿಕೆ ಕುಸಿದಿರುವುದು ಈ ಬೆಲೆ ಇಳಿಕೆಗೆ ಪ್ರಮುಖ ಕಾರಣ ಎಂದು ವಿಶ್ಲೇಷಿಸಲಾಗಿದೆ.

ಕರ್ನಾಟಕದಲ್ಲಿ ಪ್ರತಿದಿನ ಉತ್ಪಾದನೆಯಾಗುವ ಸುಮಾರು 2.2 ಕೋಟಿ ಮೊಟ್ಟೆಗಳ ಪೈಕಿ ದೊಡ್ಡ ಭಾಗವು ತಮಿಳುನಾಡಿನ ನಾಮಕ್ಕಲ್ ಮೂಲಕ ಗಲ್ಫ್ ರಾಷ್ಟ್ರಗಳಿಗೆ ರಫ್ತಾಗುತ್ತಿತ್ತು. ಆದರೆ ಮಧ್ಯಪ್ರಾಚ್ಯದಲ್ಲಿನ ಯುದ್ಧದ ಭೀತಿಯಿಂದಾಗಿ ರಫ್ತು ಪ್ರಕ್ರಿಯೆ ಸಂಪೂರ್ಣವಾಗಿ ಸ್ಥಗಿತಗೊಂಡಿದೆ. ಪ್ರತಿದಿನ ರಫ್ತಾಗುತ್ತಿದ್ದ ಸುಮಾರು 70 ಲಕ್ಷದಿಂದ 1 ಕೋಟಿ ಮೊಟ್ಟೆಗಳು ಈಗ ದೇಶೀಯ ಮಾರುಕಟ್ಟೆಯಲ್ಲೇ ಉಳಿದುಕೊಂಡಿವೆ.



ಎಲ್. ಎಂ. ನಾಗರಾಜು
ಪ್ರಧಾನ ಸಂಪಾದಕರು

ಸಂಪಾದಕೀಯ

# ಸರ್ಕಾರಿ ಡಕಾಯಿತರ ಕಬಂಧಬಾಹುವಿನಲ್ಲಿ ಬಿಡಿಎ!

## ಪೋಸ್ಟಿಂಗ್, ಡೀಲಿಂಗ್, ನೂರಾರು ಕೋಟಿ ಕಟಾಯಿಸಿ ಎಲೆಕ್ಷನ್ ಫಂಡಿಂಗ್!







ಹುದ್ದೆಗಳ ಸೇಲ್ ಕಾಲದಲ್ಲಿ ಆಡಳಿತಕ್ಕೆ ವಕ್ಕರಿಸಿದ ಅಧಿಕಾರಿಗಳ ಪಾಪ ಕೃತ್ಯದಿಂದ ಇಡೀ ರಾಜ್ಯವೇ ನರಳುತ್ತಿದೆ. ಯಾವುದೇ ಸೇವೆ ಸಿಗದ ಜನಸಾಮಾನ್ಯರದ್ದು ನರಕವೂ ಇಲ್ಲದ ಸ್ವರ್ಗವೂ ಇಲ್ಲದ ತ್ರಿಶಂಕು ಸ್ಥಿತಿ. ಸ್ವತಂತ್ರ್ಯ ಬಂದು ಏಳು ದಶಕಗಳು ಕಳೆದರೂ ಜನರ ಜಮೀನು ಅವರ ಹೆಸರಿಗೆ ಆಗಿಲ್ಲ. ಲಂಚ ಕೊಡದೆ ಹುಲ್ಲುಕಡ್ಡಿಯೂ ಅಲುಗಲ್ಲ. ಗವರ್ನಮೆಂಟ್ ಜಾಬ್ ಬಿಟ್ರೆ ಯಾವುದೇ ಬಿಸಿನೆಸ್ ಮಾಡಿದರೂ ವೇಸ್ಟ್. ಕೃಷಿ ಮಾಡಿದರೂ ಬೆಳೆಯಲ್ಲ, ಉದ್ಯಮ ಕಟ್ಟಿದರೂ ಬೆಳೆಯೋಕಾಗಲ್ಲ. ಇದಕ್ಕೆ ಪ್ರಮುಖ ಅಡ್ಡಿಯೇ ಅಧಿಕಾರಶಾಹಿ. ಅಧಿಕಾರಶಾಹಿಯ ಕಬಂಧಬಾಹುಗಳು ಕಾನೂನುಗಳನ್ನು ಮೀರಿ ದೇಶವಾಸಿಗಳನ್ನು ಶೋಷಿಸಲು ನಿಂತಿವೆ. ನ್ಯಾಯಾಂಗ, ಶಾಸಕಾಂಗ ಮತ್ತು ಬ್ಯೂರೋಕ್ರಸಿಯ ಕೆಲ ಸುಧಾರಕರು ಎಷ್ಟೇ ಯತ್ನಪಟ್ಟರೂ ಭ್ರಷ್ಟರ ಕೋಟೆ ಭೇದಿಸಲು ಅಸಾಧ್ಯ ಎನ್ನುವಂತಾಗಿದೆ.

ಇಂಥದ್ದೇ ಭ್ರಷ್ಟ ಕೂಟವೊಂದು ಬಿಡಿಎಯಲ್ಲಿ ಎಸಗಿರುವ ಮಹಾ ಹಗರಣವೊಂದು ಇದೀಗ ಚರ್ಚೆಯಲ್ಲಿದೆ. ಬಿಡಿಎಯನ್ನು ಜನಪರವಾಗಿಸಲು ಡಿಕೆ ಶಿವಕುಮಾರ್ ಅವರು ಆಯುಕ್ತ ಮಣಿವಣ್ಣನ್ ಅವರ ಮೂಲಕ ಪ್ರಯತ್ನ ಮಾಡುತ್ತಿದ್ದರೆ, ಇತ್ತ ಭ್ರಷ್ಟ ಅಧಿಕಾರಿಗಳು ತಾವೇ ರಿಯಲ್ ಎಸ್ಟೇಟ್ ದಂಧೆ ನಡೆಸುತ್ತಿರೋದು ಬಯಲಾಗಿದೆ.ಎಪ್ಪತ್ತಕ್ಕೂ ಹೆಚ್ಚು ಅಧಿಕಾರಿಗಳು ಬಿಡಿಎ ನಿರ್ಮಾಣ ಮಾಡುತ್ತಿರುವ ಬಡಾವಣೆಗಳಲ್ಲಿ ರೈತರ ಜಮೀನನ್ನು ತಾವೇ ಬೇನಾಮಿಯಾಗಿ ಖರೀದಿಸಿ ಪರಿಹಾರ ಪಡೆಯಲು ಮುಂದಾಗಿದ್ದಾರೆ. ತಮ್ಮ ನೆಂಟರು, ಸ್ನೇಹಿತರು, ಕಡೆಗೆ ಅವರವರ ಪ್ರೇಯಸಿಯರ ಹೆಸರಲ್ಲೂ ಬೇನಾಮಿ ಹೂಡಿಕೆ ಮಾಡಿದ್ದಾರೆ. ಪರಿಹಾರ ಕೇಳಿ ಬರುವ ರೈತರಿಂದಲೇ ಜಿಪಿಎ, ಕ್ರಯದ ಕರಾರು ಒಪ್ಪಂದ ಮಾಡಿಕೊಂಡು ಸರ್ಕಾರಕ್ಕೆ ದ್ರೋಹ ಬಗೆಯುತ್ತಿದ್ದಾರೆ. ಕಮಾಯಿಸಿದ ಬ್ಲಾಕ್ ಮನಿಯನ್ನು ಎಸ್‌ಆರ್ ರೇಟ್ನಲ್ಲಿ ಬ್ಯಾಂಕ್ ಅಕೌಂಟ್ ಮೂಲಕ ಮತ್ತು ಉಳಿದ್ದನ್ನು ಕ್ಯಾಶ್ ಮೂಲಕ ಇನ್ವೆಸ್ಟ್ ಮಾಡಿ ನೂರಾರು ಕೋಟಿ ವೈಟ್ ಮನಿ ಮಾಡಿಕೊಳ್ಳುವತ್ತ ದಾಪುಗಾಲಿಡುತ್ತಿದ್ದಾರೆ.  ಅಮಾಯಕ ರೈತರಿಂದ ಭೂಮಿ ಬರೆಸಿಕೊಳ್ಳುವ ನೀಚರು ತಿಂದ ತಟ್ಟೆಯಲ್ಲಿ ಶೌಚ ಮಾಡುವ ದುಷ್ಕೃತ್ಯಕ್ಕೆ  ಇಳಿದಿದ್ದಾರೆ.

ಹೇಗೋ ಇವರ ದಂಧೆ ಡಿಸಿಎಂ ಡಿಕೆ ಶಿವಕುಮಾರ್ಗೆ ಗೊತ್ತಾಗಿದೆ. ಇಂಥ ದಂಧೆಕೋರರ ಆಟವನ್ನು ದಶಕಗಳಿಂದ ಬಲ್ಲ ಡಿಸಿಎಂ, ಬೇನಾಮಿ ಲ್ಯಾಂಡ್ ಡೀಲಿಂಗ್ ನಡೆಸುತ್ತಿದ್ದ ಅಧಿಕಾರಿಗಳ ಪಟ್ಟಿ ತರಿಸಿ ಎಲ್ಲರೆದುರು ನಿಲ್ಲಿಸಿ ಆಟ ನಿಲ್ಲಿಸದಿದ್ದರೆ ಜೋಡು ಕೈಗೆತ್ತಿಕೊಳ್ಳುವುದಾಗಿ ಗದರಿಸಿರುವ ಘಟನೆ ವರದಿಯಾಗಿದೆ. ಡಿಸಿಎಂ ಕೈಲಿ ಉಗಿಸಿಕೊಂಡ ಸರ್ಕಾರಿ ಡಕಾಯಿತರು ಮುಖ ಒರೆಸಿಕೊಂಡು ಅಷ್ಟೇ ಅಲ್ಲವಾ ಬಿಡು ಎಂದು ಕಡೆಗೆ ಡಿಸಿಎಂ ಮತ್ತು ಕಮಿಷನರ್ ವಿರುದ್ಧವೇ ಕಂಡಕಂಡಲ್ಲಿ ಮಾತಾಡುತ್ತಾ ಅವರ ಮೇಲೆ ತಮ್ಮ ಚೇಲಾಗಳಲ್ಲಿ ಬಿಟ್ಟು ಬೇಹುಗಾರಿಕೆ ಮಾಡಿಸಲು ಮುಂದಾಗಿದ್ದಾರೆ ಎಂಬ ಮಾಹಿತಿ ಇದೆ.. ಡಿಸಿಎಂ ಲಿಸ್ಟ್ ನಲ್ಲಿರುವ ಖದೀಮರ  ರಿಯಲ್ ಎಸ್ಟೇಟ್ ಹೂಡಿಕೆ ಬಗ್ಗೆ  ಸರ್ಕಾರ ವಿಶೇಷ  ತನಿಖೆ  ತನಿಖೆ ನಡೆಸಬೇಕು. ಅಕ್ರಮ ಸಂಪತ್ತಿನ ಮೂಲಕ ಎಮ್ಮೆಲ್ಲೆಗಳಾಗಲು ಹೊರಟವರಿಗೆ ಬರೆ ಎಳೆಯಬೇಕು.

# ಪರಪ್ಪನ ಅಗ್ರಹಾರದಲ್ಲಿ ವಾರ್ಡನ್ ಕಳ್ಳಾಟ!

## ಒಳ ಉಡುಪಿನಲ್ಲಿ ಗಾಂಜಾ ಅಡಗಿಸಿಟ್ಟು ಸಾಗಿಸುತ್ತಿದ್ದಾಗ ಸಿಕ್ಕಿಬಿದ್ದ ಕಿರಾತಕ!

**ಬೆಂಗಳೂರು:** ರಾಜ್ಯದ ಅತ್ಯಂತ ಸುರಕ್ಷಿತ ಜೈಲು ಎಂದು ಕರೆಯಲ್ಪಡುವ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಈಗ ಖದೀಮ ವಾರ್ಡನ್ ಒಬ್ಬನ ಅಸಲಿ ಮುಖ ಬಯಲಾಗಿದೆ. ಜೈಲಿನ ವಾರ್ಡನ್ ಆಗಿದ್ದ ಪ್ರಕಾಶ್ ಗಾವಡೆ ಎಂಬಾತ ತನ್ನ ಒಳ ಉಡುಪಿನಲ್ಲಿ ಗಾಂಜಾ ಅಡಗಿಸಿಟ್ಟುಕೊಂಡು ಕೈದಿಗಳಿಗೆ ಸರಬರಾಜು ಮಾಡಲು ಯತ್ನಿಸುತ್ತಿದ್ದಾಗ ರೆಡ್ ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾನೆ. ಮಾರ್ಚ್ 9ರಂದು ರಾತ್ರಿ ಕರ್ತವ್ಯಕ್ಕೆ ಹಾಜರಾಗುವಾಗ ತಪಾಸಣೆ ನಡೆಸಿದ ಕೆಎಸ್ಐಎಸ್ಎಫ್ (KSISF) ಸಿಬ್ಬಂದಿ, ಈತನ ಒಳ ಉಡುಪಿನಲ್ಲಿದ್ದ ಕಪ್ಪು ಟೇಪ್ ಸುತ್ತಿದ ಗಾಂಜಾ ಪೊಟ್ಟಣ ಮತ್ತು ಹಣವನ್ನು ಪತ್ತೆಹಚ್ಚಿದ್ದಾರೆ. ತಕ್ಷಣವೇ ಆರೋಪಿಯನ್ನು ಬಂಧಿಸಿರುವ ಪೊಲೀಸರು ಜೈಲು ಅಕ್ರಮದ ಬೆನ್ನತ್ತಿದ್ದಾರೆ.







**10 ಸಾವಿರ ರೂ. ಆಮಿಷಕ್ಕೆ ಬಲಿಯಾದ ವಾರ್ಡನ್: ಕೊಲೆ ಆರೋಪಿಯ ಸ್ಫೋಟಕ ಡೀಲ್ ಬಯಲು!**

ಪೊಲೀಸ್ ವಿಚಾರಣೆಯ ವೇಳೆ ಈ ಅಕ್ರಮದ ಹಿಂದಿನ ರೋಚಕ ಕಥೆ ಹೊರಬಂದಿದೆ. ಜೈಲಿನಲ್ಲಿರುವ ಕೊಲೆ ಪ್ರಕರಣದ ಆರೋಪಿಯೊಬ್ಬ ಈ ವಾರ್ಡನ್ ಜೊತೆ ಮಾತುಕತೆ ನಡೆಸಿದ್ದ ಎನ್ನಲಾಗಿದೆ. ಹೊರಗಿನಿಂದ ಗಾಂಜಾ ತಂದು ಜೈಲಿನೊಳಗೆ ತಲುಪಿಸಿದರೆ ಬರೋಬ್ಬರಿ 10 ಸಾವಿರ ರೂಪಾಯಿ ನೀಡುವುದಾಗಿ ಆಮಿಷ ಒಡ್ಡಿದ್ದ. ಈ ಹಣದ ಆಸೆಗಾಗಿ ಕಾನೂನು ರಕ್ಷಕನೇ ಭಕ್ಷಕನಾಗಿ ಬದಲಾಗಿ, ಜೈಲಿನ ಭದ್ರತಾ ಕಣ್ಣು ತಪ್ಪಿಸಿ ಗಾಂಜಾ ಸಾಗಿಸಲು ಹೋಗಿ ಈಗ ಕಂಬಿ ಎಣಿಸುತ್ತಿದ್ದಾನೆ. ಪರಪ್ಪನ ಅಗ್ರಹಾರ ಪೊಲೀಸರು ಈ ಜಾಲದಲ್ಲಿ ಇನ್ನು ಯಾರಿದ್ದಾರೆ ಎಂಬ ಬಗ್ಗೆ ತನಿಖೆ ಚುರುಕುಗೊಳಿಸಿದ್ದಾರೆ.

**ಡಿಜಿಪಿ ಎಚ್ಚರಿಕೆಗೂ ಕವಡೆ ಕಾಸಿನ ಕಿಮ್ಮತ್ತಿಲ್ಲ! ಪರಪ್ಪನ ಅಗ್ರಹಾರದಲ್ಲಿ ಮುಂದುವರಿದ ಗಾಂಜಾ ದಂಧೆ!**

ಕಳೆದ ಡಿಸೆಂಬರ್‌ನಲ್ಲಿ ಜೈಲಿಗೆ ಭೇಟಿ ನೀಡಿದ್ದ ಡಿಜಿಪಿ ಅವರು ಸಿಬ್ಬಂದಿಗೆ ಕಡಕ್ ವಾರ್ನಿಂಗ್ ನೀಡಿದ್ದರು. ಮೊಬೈಲ್ ಅಥವಾ ಗಾಂಜಾ ಸಾಗಾಟದಲ್ಲಿ ಯಾರೇ ಭಾಗಿಯಾದರೂ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದರು. ಅಡುಗೆ ಮನೆಯಲ್ಲಿ ವೈನ್ ತಯಾರಿಕೆ ಅಥವಾ ಇತರ ಅಕ್ರಮ ಚಟುವಟಿಕೆಗಳು ನಡೆದರೆ ಸುಮ್ಮನಿರುವುದಿಲ್ಲ ಎಂದೂ ಹೇಳಿದ್ದರು. ಇಷ್ಟೆಲ್ಲಾ ಕಟ್ಟುನಿಟ್ಟಿನ ಸೂಚನೆಗಳ ನಡುವೆಯೂ ಜೈಲಿನ ಸಿಬ್ಬಂದಿಯೇ ಇಂತಹ ಅಸಹ್ಯಕರ ಕೃತ್ಯದಲ್ಲಿ ತೊಡಗಿರುವುದು ಜೈಲು ಭದ್ರತೆಯ ವೈಫಲ್ಯವನ್ನು ಎತ್ತಿ ತೋರಿಸುತ್ತಿದೆ.

# ನೈಸ್ ರಸ್ತೆ ಶೀಘ್ರದಲ್ಲೇ ಟೋಲ್ ಮುಕ್ತ?



**ಬೆಂಗಳೂರು:** ಸಿಲಿಕಾನ್ ಸಿಟಿಯ ದ್ವಿಚಕ್ರ ವಾಹನ ಸವಾರರಿಗೆ ರಾಜ್ಯ ಸರ್ಕಾರ ಭರ್ಜರಿ ಗುಡ್ ನ್ಯೂಸ್ ನೀಡಲು ಸಜ್ಜಾಗಿದೆ. ನಗರದ ಪ್ರಮುಖ ಪೆರಿಫೆರಲ್ ಎಕ್ಸ್‌ಪ್ರೆಸ್‌ವೇ ಆಗಿರುವ ನೈಸ್ (NICE) ರಸ್ತೆಯಲ್ಲಿ ದ್ವಿಚಕ್ರ ವಾಹನಗಳಿಗೆ ಟೋಲ್ ಶುಲ್ಕವನ್ನು ಸಂಪೂರ್ಣವಾಗಿ ರದ್ದುಪಡಿಸುವ ಕುರಿತು ಸರ್ಕಾರ ಗಂಭೀರ ಚಿಂತನೆ ನಡೆಸಿದೆ. ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ ಎಂಎಲ್ಸಿ ರಾಮೋಜಿ ಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ಈ ಮಹತ್ವದ ಸುಳಿವು ನೀಡಿದ್ದಾರೆ. ಇದು ಜಾರಿಯಾದಲ್ಲಿ ನಿತ್ಯ ಸಾವಿರಾರು ರೂಪಾಯಿ ಟೋಲ್ ಕಟ್ಟುವ ಬೈಕ್ ಸವಾರರಿಗೆ ಭಾರಿ ಆರ್ಥಿಕ ನೆಮ್ಮದಿ ಸಿಗಲಿದೆ.

ನೈಸ್ ರಸ್ತೆ ಯೋಜನೆಗಾಗಿ ಭೂಮಿ ನೀಡಿದ ರೈತರಿಗೆ ಪರಿಹಾರ ಸಿಗದಿರುವುದು ಮತ್ತು ರಸ್ತೆ ನಿರ್ವಹಣೆ ಸರಿಯಾಗಿಲ್ಲ ಎಂಬ ಆರೋಪಗಳ ಬೆನ್ನಲ್ಲೇ ಸರ್ಕಾರ ಕಠಿಣ ಕ್ರಮಕ್ಕೆ ಮುಂದಾಗಿದೆ. ಗೃಹ ಸಚಿವರ ಅಧ್ಯಕ್ಷತೆಯಲ್ಲಿ ರಚನೆಯಾಗಿರುವ ಸಚಿವ ಸಂಪುಟದ ಉಪ ಸಮಿತಿಯು ಟೋಲ್ ವಸೂಲಿ, ಒಪ್ಪಂದದ ಷರತ್ತುಗಳು ಮತ್ತು ಯೋಜನೆಯ ಪ್ರಸ್ತುತ ಸ್ಥಿತಿಗತಿಗಳ ಬಗ್ಗೆ ಸಮಗ್ರ ಪರಿಶೀಲನೆ ನಡೆಸುತ್ತಿದೆ.

# ತೈಲ ಟ್ಯಾಂಕರ್ ಮೇಲೆ ಭೀಕರ ಆತ್ಮಾಹುತಿ ದಾಳಿ! ಭಾರತೀಯ ನಾವಿಕ ದುರ್ಮರಣ!

**ಬಸ್ರಾ, (ಇರಾಕ್):** ಮಧ್ಯಪ್ರಾಚ್ಯದ ಉದ್ವಿಗ್ನತೆಯ ನಡುವೆ ಭೀಕರ ರಕ್ತಪಾತ ಸಂಭವಿಸಿದೆ! ಇರಾಕ್‌ನ ಬಸ್ರಾ ಕರಾವಳಿಯ ಸಮೀಪ ಅಮೆರಿಕದ ಕಂಪನಿಗೆ ಸೇರಿದ 'ಸಫೇಸಿಯಾ ವಿಷ್ಣು' ಎಂಬ ಬೃಹತ್ ತೈಲ ಟ್ಯಾಂಕರ್ ಮೇಲೆ ಇರಾನ್ ಮೂಲದ ಆತ್ಮಹತ್ಯಾ ದೋಣಿ ಮೂಲಕ ಭೀಕರ ದಾಳಿ ನಡೆಸಲಾಗಿದೆ. ಈ ಆತ್ಮಾಹುತಿ ದಾಳಿಯಲ್ಲಿ ಹಡಗಿನಲ್ಲಿದ್ದ ಓರ್ವ ಭಾರತೀಯ ಸಿಬ್ಬಂದಿ ಸಾವನ್ನಪ್ಪಿದ್ದಾರೆ ಎಂದು ಮೂಲಗಳು ಖಚಿತಪಡಿಸಿವೆ. ದಕ್ಷಿಣ ಇರಾಕ್‌ನ ಖೋರ್ ಅಲ್ ಜುಬೈರ್ ಬಂದರು ಸಮೀಪ ಸರಕು ವರ್ಗಾವಣೆ ನಡೆಯುತ್ತಿದ್ದಾಗಲೇ ಈ ದುರ್ಘಟನೆ ಸಂಭವಿಸಿದ್ದು, ಅಂತರಾಷ್ಟ್ರೀಯ ಮಟ್ಟದಲ್ಲಿ ಆತಂಕ ಸೃಷ್ಟಿಸಿದೆ.

**27 ಸಿಬ್ಬಂದಿ ಪಾರು, ಒಬ್ಬರು ಬಲಿ: ಮೃತ ಭಾರತೀಯನ ಗುರುತು ಪತ್ತೆಗೆ ಅಧಿಕಾರಿಗಳ ಕಸರತ್ತು!**

ದಾಳಿಯ ವೇಳೆ ಹಡಗಿನಲ್ಲಿದ್ದ ಒಟ್ಟು 28 ಸಿಬ್ಬಂದಿಗಳ ಪೈಕಿ 27 ಜನರನ್ನು ಸುರಕ್ಷಿತವಾಗಿ ರಕ್ಷಿಸಿ ಬಸ್ರಾಕ್ಕೆ ಕರೆದೊಯ್ಯಲಾಗಿದೆ. ಆದರೆ, ದುರದೃಷ್ಟವಶಾತ್ ಓರ್ವ ಭಾರತೀಯ ಪ್ರಜೆ ಈ ದಾಳಿಗೆ ಬಲಿಯಾಗಿದ್ದಾರೆ. ಮೃತರ ಗುರುತನ್ನು ಅಧಿಕಾರಿಗಳು ಇನ್ನೂ ಬಹಿರಂಗಪಡಿಸಿಲ್ಲ. ಮಾರ್ಷಲ್ ದ್ವೀಪಗಳ ಧ್ವಜದಡಿ ಪ್ರಯಾಣಿಸುತ್ತಿದ್ದ ಈ ಕಚ್ಚಾ ತೈಲ ಟ್ಯಾಂಕರ್ ಸುಮಾರು 228 ಮೀಟರ್ ಉದ್ದವಿದ್ದು, 2007ರಲ್ಲಿ ನಿರ್ಮಿತವಾಗಿತ್ತು. ಈ ದಾಳಿಯು ಸಮುದ್ರ ಮಾರ್ಗದಲ್ಲಿ ಸಂಚರಿಸುವ ಸರಕು ಹಡಗುಗಳ ಭದ್ರತೆಯ ಬಗ್ಗೆ ದೊಡ್ಡ ಪ್ರಶ್ನಾರ್ಥಕ ಚಿಹ್ನೆ ಮೂಡಿಸಿದೆ.

**ನಾವಿಕರ ರಕ್ಷಣೆಗೆ ಭಾರತ ಸರ್ಕಾರಕ್ಕೆ ಮನವಿ: ಜಾಗತಿಕ ಹಡಗು ದಂಧೆಯಲ್ಲಿ ಭಾರತೀಯರಿಗೆ ಭೀತಿ!**

ವಿಶ್ವದ ಒಟ್ಟು ನಾವಿಕರಲ್ಲಿ ಶೇಕಡಾ 15ರಷ್ಟು ಭಾರತೀಯರೇ ಇರುವುದರಿಂದ, ಇಂತಹ ದಾಳಿಗಳು ಭಾರತೀಯ ಸಿಬ್ಬಂದಿಗಳ ಪಾಲಿಗೆ ಮೃತ್ಯುಪಾಶವಾಗಿ ಪರಿಣಮಿಸುತ್ತಿವೆ. ಹಡಗು ನಿರ್ವಹಣಾ ಸಂಸ್ಥೆಗಳು ಈ ಘಟನೆಗೆ ತೀವ್ರ ವಿಷಾದ ವ್ಯಕ್ತಪಡಿಸಿದ್ದು, ಸಮುದ್ರದಲ್ಲಿ ಕೆಲಸ ಮಾಡುವ ನಾವಿಕರ ಭದ್ರತೆಗಾಗಿ ತಕ್ಷಣ ಕ್ರಮ ಕೈಗೊಳ್ಳುವಂತೆ ಭಾರತ ಸರ್ಕಾರವನ್ನು ಆಗ್ರಹಿಸಿವೆ. ಪಶ್ಚಿಮ ಏಷ್ಯಾದಲ್ಲಿ ಉದ್ಭವಿಸಿರುವ ಯುದ್ಧದಂತಹ ಪರಿಸ್ಥಿತಿಯು ಈಗ ಜಾಗತಿಕ ವ್ಯಾಪಾರ ಮಾರ್ಗಗಳ ಮೇಲೆ ನೇರ ಪರಿಣಾಮ ಬೀರುತ್ತಿದ್ದು, ಭಾರತೀಯ ಕುಟುಂಬಗಳಲ್ಲಿ ಆತಂಕ ಮೂಡಿಸಿದೆ.



# ಬೆಂಗಳೂರಿನಲ್ಲಿ ಉಸಿರಾಡುವುದೇ ಕಷ್ಟ! ; ಹಲವೆಡೆ ಗಾಳಿ 'ವಿಷ'!



**ಬೆಂಗಳೂರು:** ಸಿಲಿಕಾನ್ ಸಿಟಿ ಬೆಂಗಳೂರು ಸೇರಿದಂತೆ ರಾಜ್ಯದ ಪ್ರಮುಖ ನಗರಗಳಲ್ಲಿ ವಾಯು ಗುಣಮಟ್ಟ (Air Quality) ಅಪಾಯಕಾರಿ ಮಟ್ಟಕ್ಕೆ ಕುಸಿದಿದೆ. ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಮಾಲಿನ್ಯವು ಸ್ಥಳೀಯರಲ್ಲಿ ತೀವ್ರ ಆತಂಕ ಮೂಡಿಸಿದೆ. ಬೆಂಗಳೂರಿನಲ್ಲಿ ಇಂದು ವಾಯು ಗುಣಮಟ್ಟ ಸೂಚ್ಯಂಕ (AQI) 155ಕ್ಕೆ ತಲುಪಿದ್ದು, ಇದು ಆರೋಗ್ಯಕ್ಕೆ ಅತ್ಯಂತ ಮಾರಕ ಎಂದು ಪರಿಗಣಿಸಲಾಗಿದೆ. ಕೇವಲ ಬೆಂಗಳೂರು ಮಾತ್ರವಲ್ಲದೆ ಬಳ್ಳಾರಿ, ಉಡುಪಿ ಮತ್ತು ಮಂಗಳೂರಿನಲ್ಲೂ ಗಾಳಿಯ ಗುಣಮಟ್ಟ 150ರ ಗಡಿ ದಾಟಿದ್ದು, ಜನ ಸಾಮಾನ್ಯರು ಶುದ್ಧ ಗಾಳಿಗಾಗಿ ಹಾತೊರೆಯುವಂತಾಗಿದೆ.

ರಾಜ್ಯಾದ್ಯಂತ ತಾಪಮಾನ ಏರಿಕೆಯಾಗುತ್ತಿದ್ದು, ಈ ತಿಂಗಳು ಪೂರ್ತಿ ಬಿಸಿಲಿನ ತೀವ್ರತೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಈ ನಡುವೆ ಉಡುಪಿ ಮತ್ತು ಮಂಗಳೂರಿನಂತಹ ಕರಾವಳಿ ಜಿಲ್ಲೆಗಳಲ್ಲೂ ವಾಯು ಗುಣಮಟ್ಟ ಹದಗೆಟ್ಟಿರುವುದು ಕಳವಳಕಾರಿ ಸಂಗತಿಯಾಗಿದೆ.